# ನಾಟಿ ಮತ್ತು ಕಟಾವು ಯಂತ್ರಗಳೆರಡನ್ನೂ ಬಳಸುವುದರ ಲಾಭ

## ಉತ್ಪಾದನಾ ವೆಚ್ಚ







## ವೆಚ್ಚದ ಉಳಿತಾಯ

ಎಕರೆಗೆ ರೂ. 8704 → ಶೇಕಡವಾರು → 30%

ಕ್ವಿಂಟಾಲ್‌ಗೆ ರೂ. 557 → 47%

ರಾಜ್ಯ ಸರ್ಕಾರ ಕೇಂದ್ರದ ಬೆಂಬಲ ಬೆಲೆ ಮೇಲೆ ರೂ. 100 ಪ್ರೋತ್ಸಾಹಧನ ನೀಡಿ ಕ್ವಿಂಟಾಲ್‌ಗೆ 1510 ರಂತೆ ಖರೀದಿಸಿದ್ದು, ಯಂತ್ರಗಳನ್ನು ಬಳಸಿದರೆ ರೈತ ಭರಿಸುವ ಉತ್ಪಾದನಾ ವೆಚ್ಚ ಗಮನಾರ್ಹವಾಗಿ ಇಳಿದು ಬೆಂಬಲ ಬೆಲೆ ಲಾಭವಾಗಲಿದೆ.

## ರಾಜ್ಯ ಸರ್ಕಾರದ ಕ್ರಮಗಳು

ಅ) **ಕೃಷಿ ಯಾಂತ್ರೀಕರಣ:** ಪವರ್ ಟಿಲ್ಲರ್, ಭೂಮಿ ಸಿದ್ಧತೆ, ಬಿತ್ತನೆ ಮತ್ತು ಅಂತರ ಬೇಸಾಯಕ್ಕೆ ಕೃಷಿ ಯಂತ್ರೋಪಕರಣಗಳು, ಡೀಸೆಲ್ ಪಂಪ್ ಸೆಟ್‌ಗಳು, ಟ್ರ್ಯಾಕ್ಟರ್ / ಟಿಲ್ಲರ್ / ಯಂತ್ರ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಕಟಾವು, ಒಕ್ಕಣೆ ಕೃಷಿ ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ರೈತರಿಗೆ ಸಹಾಯಧನ ನೀಡಲಾಗುತ್ತಿದೆ.

ಆ) **ಕೃಷಿ ಯಂತ್ರಧಾರೆ:** ಕೃಷಿ ಯಂತ್ರೋಪಕರಣಗಳ ಬಾಡಿಗೆ ಸೇವಾ ಕೇಂದ್ರಗಳಲ್ಲಿ ರೈತರಿಗೆ ಸಕಾಲದಲ್ಲಿ ಮತ್ತು ಕಡಿಮೆ ದರದಲ್ಲಿ ಬಾಡಿಗೆಗೆ ಯಂತ್ರೋಪಕರಣಗಳನ್ನು ಒದಗಿಸಲಾಗುತ್ತಿದೆ. ಈಗಾಗಲೇ 175 ಕೇಂದ್ರಗಳು ಕಾರ್ಯಪ್ರವೃತ್ತವಾಗಿದ್ದು, ಸದ್ಯದಲ್ಲೇ 315 ಅಧಿಕ ಕೇಂದ್ರಗಳನ್ನು ತೆರೆಯಲು ತೀರ್ಮಾನಿಸಲಾಗಿದೆ.

ಇ) **ಕರ್ನಾಟಕ ಕೃಷಿ ಬೆಲೆ ಆಯೋಗ:** ಕೃಷಿ ಯಂತ್ರಗಳ ಬಳಕೆಯಿಂದಾಗುವ ವೆಚ್ಚದ ಉಳಿತಾಯ ಮತ್ತು ಆರ್ಥಿಕದಾಯಕತೆಗಳ ಬಗ್ಗೆ ವಿವರವಾದ ಅಧ್ಯಯನ ನಡೆಸಿರುತ್ತದೆ. ಇವುಗಳ ವ್ಯಾಪಕ ಬಳಕೆಗೆ ಸಮಗ್ರ ಕಾರ್ಯ ಯೋಜನೆ ರೂಪಿಸಲು ಬೆಲೆ ಆಯೋಗ ಕಾರ್ಯೋನ್ಮುಖವಾಗಿದೆ.


**ಎಂ. ಮಹೇಶ್ವರ್ ರಾವ್,** ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು

**ಪಾಂಡುರಂಗ. ಬಿ. ನಾಯಕ,** ಭಾ.ಆ.ಸೇ.
ಕೃಷಿ ಆಯುಕ್ತರು

**ಬಿ. ವೈ. ಶ್ರೀನಿವಾಸ್**
ಕೃಷಿ ನಿರ್ದೇಶಕರು


ಹೆಚ್ಚಿನ ಮಾಹಿತಿಗಾಗಿ ಸಮೀಪದ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರೈತ ಸಂಪರ್ಕ ಕೇಂದ್ರ, ರೈತ ಸಹಾಯವಾಣಿ – 1800– 4253553, ಕಿಸಾನ್ ಕರೆ ಕೇಂದ್ರ 1800 – 1801551 ಸಂರ್ಪಕಿಸಿ.


ಕರ್ನಾಟಕ ಕೃಷಿ
ಬೆಲೆ ಆಯೋಗ

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ
ಕೃಷಿ ಇಲಾಖೆ


# "ಯಂತ್ರ ಬಳಸಿ ವೆಚ್ಚ ಇಳಿಸಿ"



## ಮಳೆಯಾಶ್ರಿತ ಭತ್ತದ ಬೇಸಾಯದಲ್ಲಿ ಯಾಂತ್ರೀಕರಣದ ಲಾಭದಾಯಕತೆ



ಉತ್ಪಾದನಾ ವೆಚ್ಚದ ವಿವರ




ಮೇ 2016

## ಮುನ್ನುಡಿ

ಕೃಷಿಯಲ್ಲಿ ಕಾರ್ಮಿಕರ ಕೊರತೆ ಹೆಚ್ಚಾಗಿ ಕೂಲಿ ದರ ದಿನೇ ದಿನೇ ಏರುತ್ತಲಿದ್ದು, ಉತ್ಪಾದನಾ ವೆಚ್ಚ ಅಧಿಕವಾಗುತ್ತಿದೆ. ಕೃಷಿ ಲಾಭದಾಯಕತೆ ಮೇಲೆ ಇದು ತೀವ್ರ ಪರಿಣಾಮ ಬೀರಿದ್ದು ಕೃಷಿಯಲ್ಲಿ ಯಂತ್ರಗಳನ್ನು ಬಳಸುವುದು ಇದಕ್ಕೆ ಸೂಕ್ತ ಪರಿಹಾರ. ಯಾಂತ್ರೀಕರಣದಿಂದ ಕಾರ್ಮಿಕರ ಮೇಲಿನ ಅವಲಂಬನೆ ಕಡಿಮೆಯಾಗಿ ಉತ್ಪಾದನಾ ವೆಚ್ಚ ಇಳಿದು ಬೇಸಾಯ ಲಾಭದಾಯಕವಾಗಲಿದೆ. ಹಾಗೇ, ಉತ್ಪಾದಕತೆ ಸಹ ಅಧಿಕವಾಗಲಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಉಳುಮೆಯಿಂದ ಕೊಯ್ಲಿನವರೆಗೆ ಉಪಯುಕ್ತವಿರುವ ಹಲವಾರು ಯಂತ್ರಗಳನ್ನು ರಿಯಾಯ್ತಿ ದರದಲ್ಲಿ ರೈತರಿಗೆ ವಿತರಿಸುತ್ತಿದೆ. ಹಾಗೇ, **"ಕೃಷಿ ಯಂತ್ರಧಾರೆ"** ಯೋಜನೆಯಡಿ ಬಾಡಿಗೆ ಆಧಾರದಲ್ಲಿ ಇವುಗಳ ಸೇವೆಯನ್ನೂ ಕಡಿಮೆ ದರದಲ್ಲಿ ಒದಗಿಸುತ್ತಲಿದೆ.

ಕೃಷಿಯಲ್ಲಿ ಯಂತ್ರಗಳ ಬಳಕೆಯಿಂದ ಸಕಾಲದಲ್ಲಿ ಸರಿಯಾದ ರೀತಿಯಲ್ಲಿ ಬೇಸಾಯ ಕೈಗೊಳ್ಳಬಹುದಾಗಿದ್ದು ಆ ಮೂಲಕ ಅಧಿಕ ಲಾಭ ದೊರಕಲಿದೆ. **ಕರ್ನಾಟಕ ಕೃಷಿ ಬೆಲೆ ಆಯೋಗ** ಪ್ರಮುಖ ಬೆಳೆಗಳ ಬೇಸಾಯದಲ್ಲಿ ನಾಟಿ, ಕಟಾವು, ಒಕ್ಕಣೆ ಮುಂತಾದ ಕಾರ್ಯಗಳಲ್ಲಿ ಯಂತ್ರಗಳ ಬಳಕೆಯಿಂದಾಗುವ ವೆಚ್ಚದ ಉಳಿತಾಯ ಹಾಗೂ ಲಾಭದಾಯಕತೆಯನ್ನು ಲೆಕ್ಕಾಚಾರ ಹಾಕಿರುತ್ತದೆ.

- ರಾಗಿ, ಭತ್ತ, ತೊಗರಿ ಬೆಳೆಗಳಲ್ಲಿ ವಿವಿಧ ಕೃಷಿ ಚಟುವಟಿಕೆಗಳಲ್ಲಿ ಯಂತ್ರೋಪಕರಣಗಳನ್ನು ಬಳಸಿದರೆ ಶೇ.40 ರಷ್ಟು ವೆಚ್ಚದ ಉಳಿತಾಯವಾಗಲಿದೆ.
- **ಭತ್ತದ ಬೇಸಾಯದಲ್ಲಿ ನಾಟಿ ಯಂತ್ರದ ಬಳಕೆಯಿಂದ ವೆಚ್ಚದ ಇಳಿಕೆ ಮಾತ್ರವಲ್ಲ, ಶೇ. 70 ರಷ್ಟು ಬೀಜ ಮತ್ತು ಶೇ.25 ರಷ್ಟು ರಸಗೊಬ್ಬರ ಉಳಿತಾಯ ಮತ್ತು ಶೇ.15 ರಷ್ಟು ಇಳುವರಿ ಹೆಚ್ಚಳ ಆಗಲಿದೆ.**
- ಪವರ್ ಟಿಲ್ಲರ್ ಚಾಲನೆಯ ಕಟಾವು ಯಂತ್ರ ಬಳಸಿ ರಾಗಿ ಬೆಳೆಯನ್ನು ಕೊಯ್ಲು ಮಾಡುವುದರಿಂದ ಶೇಕಡ 56ರಷ್ಟು ಸಮಯ ಮತ್ತು ಶೇಕಡ 88ರಷ್ಟು ಕೃಷಿ ಕಾರ್ಮಿಕರ ಬಳಕೆ ಕಡಿಮೆಯಾಗುತ್ತದೆ.
- ಹಲವು ಬೆಳೆಗಳಲ್ಲಿ ಯಂತ್ರಗಳ ಬಳಕೆಯಿಂದ ರೈತ ಭರಿಸುವ ಉತ್ಪಾದನಾ ವೆಚ್ಚ (Cost $A_1$) ಗಮನಾರ್ಹವಾಗಿ ಇಳಿದು ಬೆಂಬಲ ಬೆಲೆ ಲಾಭದಾಯಕವಾಗಲಿದೆ.

ಕರ್ನಾಟಕ ಸರ್ಕಾರದ ಕೃಷಿ ಯಾಂತ್ರೀಕರಣದೆಡೆಗಿನ ಈ ವಿಸ್ತೃತ ಕಾರ್ಯಯೋಜನೆಯನ್ನು ಕೇಂದ್ರ ಸರ್ಕಾರದ **ಕೃಷಿ ವೆಚ್ಚ ಮತ್ತು ಬೆಲೆ ಆಯೋಗ** (Commission for Agricultural Costs and Prices-CACP) ಶ್ಲಾಘಿಸಿ ತನ್ನ 2016-17 ರ ಮುಂಗಾರು ಬೆಳೆಗಳ ಬೆಲೆ ನೀತಿಯ ಮೇಲಿನ ವರದಿಯಲ್ಲಿ ಉಲ್ಲೇಖಿಸಿರುತ್ತದೆ. ಸರ್ಕಾರದ ಈ ಯೋಜನೆಗಳ ಉಪಯೋಗ ಪಡೆದು ಕೃಷಿ ಉತ್ಪಾದನಾ ವೆಚ್ಚ ತಗ್ಗಿಸಿ ಆದಾಯ ಅಧಿಕಗೊಳಿಸಲು ರೈತರಿಗೆ ಈ ಕಿರುಹೊತ್ತಿಗೆ ಪ್ರೇರಣೆ ಒದಗಿಸುವುದೆಂದು ಹಾರೈಸಲಾಗಿದೆ. ಕರ್ನಾಟಕದ ಕೃಷಿ ಯಾಂತ್ರೀಕರಣದ ಈ ಯೋಜನೆ ದೇಶಕ್ಕೆ ಮಾದರಿಯಾಗಲೆಂದು ಆಶಿಸಲಾಗಿದೆ.

**ಡಾ. ಟಿ ಎನ್. ಪ್ರಕಾಶ್ ಕಮ್ಮರಡಿ**
ಅಧ್ಯಕ್ಷರು,
ಕರ್ನಾಟಕ ಕೃಷಿ ಬೆಲೆ ಆಯೋಗ

ಬೆಂಗಳೂರು
ಮೇ 2016

## ಭತ್ತ ನಾಟಿ ಯಂತ್ರದ ಲಾಭದಾಯಕತೆ



### ಉಪಯುಕ್ತತೆ

- **ಕೃಷಿ ಯಂತ್ರಧಾರ** ಸೇವಾ ಕೇಂದ್ರಗಳಲ್ಲಿ ಲಭ್ಯವಿದ್ದು, ಎಕರೆಗೆ ಸುಮಾರು ರೂ. 1700 ರವರೆಗೆ ದರವಿರುತ್ತದೆ.
- ನಾಟಿ ಯಂತ್ರ ಬಳಸುವುದರಿಂದ ಬೀಜ, ರಸಗೊಬ್ಬರಗಳ ಬಳಕೆ ಗಮನಾರ್ಹವಾಗಿ ಕಡಿಮೆಯಾಗುವುದಲ್ಲದೆ ಇಳುವರಿ ಕೂಡ ಅಧಿಕವಾಗಲಿದೆ.
- ಒಂದುವರೆ ಗಂಟೆಯಲ್ಲಿ 3 ರಿಂದ 4.5 ಲೀಟರ್ ಇಂಧನ ಬಳಸಿ ಒಂದು ಎಕರೆ ಪ್ರದೇಶದ ಬೆಳೆ ನಾಟಿ ಮಾಡಬಹುದು.
- ಇದೇ ಕಾರ್ಯಕ್ಕೆ ಎಕರೆಗೆ 6 ರಿಂದ 8 ಕಾರ್ಮಿಕರು ದಿನವಿಡೀ ಶ್ರಮಿಸಬೇಕಾಗುವುದು.
- ಒಂದು ಯಂತ್ರದ ಮೂಲಕ ದಿನಕ್ಕೆ 6 ರಿಂದ 7 ಎಕರೆ ನಾಟಿ ಮಾಡಬಹುದು.

**ನಾಟಿ ವೆಚ್ಚದ ಉಳಿತಾಯ**

ಶೇಕಡವಾರು

38%

### ಅನಾನುಕೂಲತೆ

ನಾಟಿ ಯಂತ್ರ ಬಳಸಲು ರೋಟೋವೇಟರ್‌ನ ಬಳಕೆಯ ಅಗತ್ಯವಿದೆ.

## ಭತ್ತ ಕಟಾವು ಯಂತ್ರದ ಲಾಭದಾಯಕತೆ




### ಉಪಯುಕ್ತತೆ

- **ಕೃಷಿ ಯಂತ್ರಧಾರ** ಸೇವಾ ಕೇಂದ್ರಗಳಲ್ಲಿ ಲಭ್ಯವಿದ್ದು, ಗಂಟೆಗೆ ಸುಮಾರು ರೂ. 2000 ದರವಿರುತ್ತದೆ.
- **ಸುಮಾರು ಒಂದು ಕಾಲು ಗಂಟೆಯಲ್ಲಿ ಒಂದು ಎಕರೆ ಪ್ರದೇಶದ ಬೆಳೆಯ ಕಟಾವು ಮತ್ತು ಒಕ್ಕಣೆ ಮಾಡಬಹುದು.**
- ಇದೇ ಕಾರ್ಯಕ್ಕೆ ಎಕರೆಗೆ 12 ರಿಂದ 16 ಕಾರ್ಮಿಕರು ದಿನವಿಡೀ ಶ್ರಮಿಸಬೇಕಾಗುವುದು.
- ಒಂದು ಯಂತ್ರದ ಮೂಲಕ ದಿನಕ್ಕೆ 8 ರಿಂದ 10 ಎಕರೆ ಕಟಾವು ಮಾಡಬಹುದು.
- ಅಕಾಲಿಕ ಮಳೆ ಬರುವ ಸಂದರ್ಭದಲ್ಲಿ ಶೀಘ್ರವಾಗಿ ಒಕ್ಕಣೆ ಮಾಡಿ ಧಾನ್ಯ ಸಂರಕ್ಷಿಸಬಹುದು.

**ಕಟಾವು ವೆಚ್ಚದ ಉಳಿತಾಯ**

ಶೇಕಡವಾರು

35%

### ಅನಾನುಕೂಲತೆ

ಅಧಿಕ ಹುಲ್ಲು ನಷ್ಟ ಮತ್ತು ಚಿಕ್ಕ ಹಿಡುವಳಿಗಳಲ್ಲಿ ಯಂತ್ರದ ಚಲನೆಗೆ ಕಷ್ಟ.